# ದೇಸಿ ಟೆಕ್ ಮ್ಯಾಪಲ್ಸ್ ಝಲಕ್




ಶ್ರೀಧರ್ ವೆಂಬು, ಅಶ್ವಿನಿ ವೈಷ್ಣವ್ ಬೆಂಬಲದೊಂದಿಗೆ ಗೂಗಲ್ ಮ್ಯಾಪ್ಸ್ ಮಾದರಿಯ ದೇಸಿ ಆ್ಯಪ್ ದೇಶದೊಳಗೆ ಈಚೆಗೆ ಸದ್ದು ಮಾಡುತ್ತಿದೆ. ಆ ಮ್ಯಾಪ್ ಯಾವುದು ಮತ್ತು ಅದರ ವಿಶೇಷ ಏನೆಂದು ತಿಳಿಯೋಣ.

**■ ಶಶಿಕುಮಾರ್ ಸಿ.**

ಸ್ಥಳ ಹುಡುಕಲು ಕಿಸೆಯೊಳಗಿನ ಮೊಬೈಲ್‌ನಲ್ಲಿ, ಅರಿವಿಲ್ಲದಂತೆ 'ಗೂಗಲ್ ಮ್ಯಾಪ್' ತೆರೆಯುತ್ತದೆ. ಅಷ್ಟರಮಟ್ಟಿಗೆ ಅದರ ಮೇಲೆ ಅವಲಂಬಿತರಾಗಿದ್ದೇವೆ. ನೈಜ ವಸ್ತುಸ್ಥಿತಿ ತಿಳಿಸುವ ಪರ್ಯಾಯ ಆ್ಯಪ್ ಇಲ್ಲದಿರುವುದೂ ಇದಕ್ಕೆ ಕಾರಣ. ಇಂತಹ ಪ್ರಾಬಲ್ಯ ಹೊಂದಿರುವ ಗೂಗಲ್ ಮ್ಯಾಪ್‌ಗೀಗ ಪ್ರತಿಸ್ಪರ್ಧೆಯ ಬಿಸಿಮುಟ್ಟಿಸುವ ಹುರುಪಿನೊಂದಿಗೆ ದೇಸೀಯ ನ್ಯಾವಿಗೇಷನ್ ಆ್ಯಪ್ 'ಮ್ಯಾಪಲ್ಸ್' ಬಿಡುಗಡೆಗೊಂಡಿದೆ.

ಜೊಹೊ ಸಂಸ್ಥಾಪಕ ಶ್ರೀಧರ್ ವೆಂಬು, ಈಚೆಗೆ ದೇಸಿ ಆ್ಯಪ್ 'ಮ್ಯಾಪಲ್ಸ್' ಬಗ್ಗೆ ಹಾಡಿ ಹೊಗಳಿದ್ದರು. ಅವರ ಬೆನ್ನಲ್ಲೇ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಸಹ ಆ್ಯಪ್‌ನ ಬೆನ್ನಿಗಿದ್ದರು. ಇದು ದೇಸಿಯ ಆ್ಯಪ್ ಮ್ಯಾಪಲ್ಸ್‌ಗೆ ದೊಡ್ಡಮಟ್ಟದ ಬೂಸ್ಟ್ ತಂದುಕೊಟ್ಟಿದೆ. ಈ ಆ್ಯಪ್‌ನಲ್ಲಿರುವ ನೈಜ ಸಂಚಾರದಟ್ಟಣೆ, ಟ್ರಾಫಿಕ್ ಸಿಗ್ನಲ್ ಮಾಹಿತಿಯು ಹೆಚ್ಚು ಗಮನಸೆಳೆಯುತ್ತಿದೆ.

ಮ್ಯಾಪಲ್ಸ್, 'ಮ್ಯಾಪ್‌ಮೈಇಂಡಿಯಾ'ದ ಡಿಜಿಟಲ್ ಮ್ಯಾಪಿಂಗ್ ಕಂಪನಿಯ ನ್ಯಾವಿಗೇಷನ್ ಆ್ಯಪ್. ವಿವರವಾದ ಸಂಚರಣೆ, ಲೈವ್ ಟ್ರಾಫಿಕ್ ಅಪ್‌ಡೇಟ್‌ಗಳು, ಬಳಕೆದಾರರ ಖಾಸಗೀತನ ಸುರಕ್ಷತೆಯಂತಹ ಫೀಚರ್‌ಗಳನ್ನು ಹೊಂದಿದೆ.




## ಮ್ಯಾಪ್ಸ್‌ಗಿಂತ ಮ್ಯಾಪಲ್ಸ್ ಏಕೆ?

ಜಾಗತಿಕವಾಗಿ ಬಳಕೆಯಾಗುತ್ತಿರುವ ಗೂಗಲ್ ಮ್ಯಾಪ್ಸ್ ಹಲವಾರು ಲೋಪದೋಷಗಳನ್ನು ಒಳಗೊಂಡಿದೆ. ತಪ್ಪು ಮಾರ್ಗಗಳನ್ನು ತೋರಿಸುತ್ತದೆ. ಇದು ಚಾಲಕರನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಮ್ಯಾಪಲ್ಸ್ ವಾಸ್ತವಿಕ ದತ್ತಾಂಶ ಸಂಗ್ರಹಣೆ (Onground data collection) ಮತ್ತು ಪ್ರಾದೇಶಿಕ ನಿರ್ದಿಷ್ಟ ಅಪ್‌ಡೇಟ್‌ಗಳ ಮೂಲಕ ಸ್ಥಳೀಯ ವಾಸ್ತವಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಮ್ಯಾಪಲ್ಸ್ ಭವಿಷ್ಯದಲ್ಲಿ ಗೂಗಲ್ ಮ್ಯಾಪ್ಸ್ ಮೀರಿ ಬೆಳೆಯುತ್ತದೆಯೇ ಗೊತ್ತಿಲ್ಲ. ಆದರೆ, ಆ ನಿಟ್ಟಿನಲ್ಲಿ ಸದ್ಯಕ್ಕಂತೂ ಭರವಸೆ ಮೂಡಿಸಿದೆ.

### ಸಿಗಲಿದೆ ಲೈವ್ ಸಿಗ್ನಲ್ ಟೈಮಿಂಗ್ಸ್

ದೇಶದಲ್ಲಿ ಮೊದಲ ಬಾರಿಗೆ ಮ್ಯಾಪಲ್ಸ್ ಆ್ಯಪ್‌ನಲ್ಲಿ ಬೆಂಗಳೂರಿನ ಟ್ರಾಫಿಕ್ ಸಿಗ್ನಲ್ ಟೈಮಿಂಗ್ಸ್, ಕೌಂಟ್ ಡೌನ್‌ನ ಲೈವ್ ಮಾಹಿತಿ ಲಭ್ಯವಾಗುತ್ತಿದೆ. ಇದು ಪ್ರಯಾಣಿಕರಿಗೆ ಸಂಚಾರದ ವೇಳೆ ಟ್ರಾಫಿಕ್ ಸಿಗ್ನಲ್ ಸಮಯ, ಇನ್ನೆಷ್ಟು ಸೆಕೆಂಡ್‌ಗಳ ಕಾಲ ಸಿಗ್ನಲ್ ಇರಲಿದೆ ಎಂಬ ಇತ್ಯಾದಿ ಮಾಹಿತಿಯನ್ನು ಆಯಾ ಸಮಯಕ್ಕೆ ಒದಗಿಸುತ್ತದೆ. ಬೆಂಗಳೂರು ನಗರ ಸಂಚಾರ ಪೊಲೀಸ್, ಆರ್ಕಾಡಿಸ್ ಇಂಡಿಯಾ ಮತ್ತು ಮ್ಯಾಪಲ್ಸ್ ತಾಂತ್ರಿಕ ತಂಡಗಳು ಜಂಟಿಯಾಗಿ ಈ ಉಪಕ್ರಮ ಆರಂಭಿಸಿವೆ. ಬಳಕೆದಾರರು ಟ್ರಾಫಿಕ್ ಸಿಗ್ನಲ್ ಸಮೀಪಿಸುತ್ತಿದ್ದಂತೆಯೇ ಮ್ಯಾಪಲ್ಸ್ ಟ್ರಾಫಿಕ್ ಸಿಗ್ನಲ್ ಲೈಟ್‌ನ ಲೈವ್ ಕೌಂಟ್‌ಡೌನ್ ಮಾಹಿತಿ ನೀಡುತ್ತದೆ.

ಸುಮಾರು ಮೂರು ದಶಕಗಳ ಸುದೀರ್ಘ ಅನುಭವದ ಆಧಾರದ ಮೇಲೆ ಈ ವಿಸ್ತಾರವಾದ ಮ್ಯಾಪಿಂಗ್ ಸೌಕರ್ಯದ ಆ್ಯಪ್ ನಿರ್ಮಿಸಲಾಗಿದೆ ಎಂಬುದು ಕಂಪನಿ ಮಾತು.

### ಹೊಸ ಫೀಚರ್‌ಗಳ ಹೂಗುಚ್ಛ

ಮ್ಯಾಪಲ್ಸ್ ಹೊಸ ಫೀಚರ್‌ಗಳ ಹೂಗುಚ್ಛದಂತಿದೆ. ಫೀಚರ್‌ಗಳ ಬಗ್ಗೆ ನೋಡುವುದಾದರೆ... ಬಳಕೆದಾರರಿಗೆ 3ಡಿ ಜಂಕ್ಷನ್ ವೀಕ್ಷಣೆಯಂತಹ ವಿಶೇಷ ಫೀಚರ್‌ಗಳನ್ನು ಇದು ಒದಗಿಸುತ್ತದೆ. ತನ್ನ ಬಳಕೆದಾರರು ನಿಗದಿತ ಸ್ಥಳಕ್ಕೆ ಸುಗಮವಾಗಿ ಸಂಚರಿಸಲು ನೆರವಾಗುತ್ತದೆ. ಆ್ಯಪ್ ನೆರವಿನಿಂದ ಸಂಚರಿಸುವಾಗ ಎದುರಾಗಬಹುದಾದ ದೋಷಗಳನ್ನು ತಡೆಯಲು ಕ್ರಮವಹಿಸುತ್ತದೆ. ಮೇಲ್ಸೇತುವೆಗಳು, ಕೆಳಸೇತುವೆಗಳ ವಿವರವಾದ ಸ್ಪಷ್ಟ ಚಿತ್ರಣವನ್ನು ನೈಜ ಸಮಯದಲ್ಲಿ ಸೂಚಿಸುತ್ತದೆ. ಇದರಲ್ಲಿ ಒಳಾಂಗಣ ಸಂಚರಣೆ ಸಹ ಇದ್ದು, ಇದು ಬಹುಮಹಡಿ ಕಟ್ಟಡಗಳ ಒಳಗೆ ಅಂಗಡಿಗಳು, ಕಚೇರಿಗಳನ್ನು ಪತ್ತೆಹಚ್ಚುತ್ತದೆ.

ಮ್ಯಾಪಲ್ಸ್ ಪಿನ್ (Mappls PIN), ಡಿಜಿಪಿನ್ (DigiPIN) ಎಂಬ ಡಿಜಿಟಲ್ ವಿಳಾಸ ವ್ಯವಸ್ಥೆಗಳನ್ನು ಈ ಆ್ಯಪ್ ಹೊಂದಿರುವುದು ವಿಶೇಷ. ಇದು ಭಾರತವನ್ನು 3.8 ಮೀಟರ್ ಚದರ ವಿಭಾಗಗಳಾಗಿ ವಿಂಗಡಿಸುತ್ತದೆ. ದೂರದ ಅಥವಾ ಗ್ರಾಮೀಣ ಪ್ರದೇಶಗಳನ್ನು ಸಹ ನಿಖರವಾಗಿ ನ್ಯಾವಿಗೇಟ್ ಮಾಡಲು ನೆರವಾಗುತ್ತದೆ. ಮ್ಯಾಪಲ್ಸ್ ಪಿನ್ ಸಕ್ರಿಯವಾಗಿಲ್ಲದ ಸ್ಥಳದಲ್ಲಿ, ಆ್ಯಪ್ ಹತ್ತಿರದ ಹೆಗ್ಗುರುತನ್ನು ಉಲ್ಲೇಖವಾಗಿ ಬಳಸಿಕೊಂಡು ಒಂದು ಪಿನ್ ರಚಿಸುತ್ತದೆ. ಇದು ದೇಶದಾದ್ಯಂತ ನಿಖರವಾದ ವಿಳಾಸವನ್ನು ನೀಡಲು ನೆರವಾಗುತ್ತದೆ.

ಮ್ಯಾಪಲ್ಸ್ ಪ್ರತಿದಿನ ಪ್ರಯಾಣಿಸುವವರಿಗೆ ಲೈವ್ ಟ್ರಾಫಿಕ್ ಲೈಟ್ ಕೌಂಟ್‌ಡೌನ್‌ಗಳು, ವೇಗ ಮತ್ತು ಸುರಕ್ಷತಾ ಎಚ್ಚರಿಕೆಗಳು, ಟೋಲ್ ವೆಚ್ಚದ ಅಂದಾಜುಗಳು ಮತ್ತು ಮಾರ್ಗದಲ್ಲಿ ಆಗುವ ನೈಜಸಮಯದ ಅಪ್‌ಡೇಟ್‌ಗಳಂತಹ ಫೀಚರ್‌ಗಳನ್ನು ಹೊಂದಿದೆ. ಆ್ಯಪ್ ಬಳಸುವವರ ಮಾಹಿತಿಯನ್ನು ಭಾರತದೊಳಗಿನ ಡೇಟಾ ಸೆಂಟರ್‌ಗಳಲ್ಲಿ ಸಂಗ್ರಹಿಸುತ್ತದೆ. ಈ ಕ್ರಮವು ದತ್ತಾಂಶ ಗೋಪ್ಯತೆಗೆ ಆದ್ಯತೆ ನೀಡುವ ಸಲುವಾಗಿ ಕಂಪನಿಯು ಕೈಗೊಂಡಿದೆ.

ನಕ್ಷೆಯಲ್ಲಿ ಯಾವುದೇ ಸಮಸ್ಯೆಗಳಿದ್ದರೂ ಅಥವಾ ತಪ್ಪು ಮಾಹಿತಿಯಿದ್ದರೂ ಅದನ್ನು ಸರಿಪಡಿಸುವ ಆಯ್ಕೆಯನ್ನು ಬಳಕೆದಾರರಿಗೆ ಬಿಡಲಾಗಿದೆ. ಪರಿಶೀಲನೆ ನಂತರ ತಿದ್ದುಪಡಿ ಅಪ್‌ಡೇಟ್ ಆಗಲಿದೆ. ರೈಲ್ವೆ ಇಲಾಖೆಯಲ್ಲೂ ಇದರ ಸೇವೆಗಳನ್ನು ವಿಸ್ತರಿಸಲಾಗುತ್ತದೆ ಎನ್ನಲಾಗಿದೆ. ■